ಈ) ಬಂದಿದ್ದರೆ, ಕಾರಣವೇನು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಹೌದು ಬಸ್ ಡಿಪೋ ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) 2003-04ನೇ ಸಾಲಿನಲ್ಲಿ ಆಯವ್ಯಯದಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಇ) ಯಾವುದೇ ಸಾರಿಗೆಯನ್ನು ರದ್ದುಪಡಿಸಿರುವುದಿಲ್ಲ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಚಾಮರಾಜನಗರಕ್ಕೆ ಟಿ. ನರಸೀಪುರದಿಂದ ಕುಡಿಯುವ ಯೋಜನೆ

2064 (2559) - ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರಕ್ಕೆ ಟಿ. ನರಸೀಪುರದಿಂದ ಕುಡಿಯಲು ಕಾವೇರಿ ನೀರು ಸರಬರಾಜು ಯೋಜನೆ ಪೂರ್ಣವಾಗಿದೆಯೇ?

ಆ) ಯೋಜನೆಯ ಅಂದಾಜು ವೆಚ್ಚ ಹಾಗೂ ಸಂಪೂರ್ಣಗೊಳಿಸಲು ಆದ ವೆಚ್ಚವೆಷ್ಟು?

ಇ) ಸದರಿ ಯೋಜನೆಯನ್ನು ಯಾವಾಗ ಉದ್ಘಾಟನೆ ಮಾಡಿ ನಗರಸಭೆಗೆ ವಹಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಪೂರ್ಣವಾಗಿದೆ.

ಆ) ಯೋಜನೆಯ ಅಂದಾಜು ವೆಚ್ಚ ರೂ. 615.00 ಲಕ್ಷಗಳು. ಈ ಯೋಜನೆಯು ಪರಿಷ್ಕೃತ ಅಂದಾಜು ಮೊತ್ತ ರೂ. 2489.00 ಲಕ್ಷಗಳು. ಈ ಯೋಜನೆಗೆ ಈವರೆವಿಗೆ ರೂ. 2438.00 ಲಕ್ಷಗಳು ಖರ್ಚಾಗಿರುತ್ತದೆ.

ಇ) ಚಾಮರಾಜನಗರಕ್ಕೆ ಟಿ. ನರಸೀಪುರದಿಂದ ಕುಡಿಯಲು ಕಾವೇರಿ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಿ ದಿನಾಂಕ 12.1.2001 ರಿಂದ ನೀರನ್ನು ಪಟ್ಟಣಕ್ಕೆ ಸರಬರಾಜು ಮಾಡಲಾಗುತ್ತಿದೆ. ಹಾಗೂ ಈವರೆವಿಗೂ ಚಾಮರಾಜನಗರ ನಗರಸಭೆಯವರು ನೀರು ಸರಬರಾಜು ನಿರ್ವಹಣೆಯನ್ನು ಹಸ್ತಾಂತರಿಸಿಕೊಂಡಿರುವುದಿಲ್ಲ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯಲ್ಲಿ ಐ.ಟಿ ಪಾರ್ಕ್ ಸ್ಥಾಪನೆ

2067 (2223) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯಲ್ಲಿ ಐ.ಟಿ ಪಾರ್ಕ್‌ನ ಕಟ್ಟಡಕ್ಕಾಗಿ ಸರ್ಕಾರ ಮಂಜೂರು ಮಾಡಿದ ಹಣವೆಷ್ಟು?

ಆ) ಈವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಮಂಜೂರು ಮಾಡಿದ ಹಣ ರೂ. 18.83 ಕೋಟಿಗಳು